
# ಮುಕ್ತಿ ಬೇಕಿರುವುದು ಕಾಂಗ್ರೆಸ್ಸಿನಿಂದ ಮಾತ್ರವಲ್ಲ

prajavani.net/columns/anuranana/ಮುಕ್ತಿ-ಬೇಕಿರುವುದು-ಕಾಂಗ್ರೆಸ್ಸಿನಿಂದ-ಮಾತ್ರವಲ್ಲ-1773036

ನಾರಾಯಣ ಎ

Last Updated 7 ಜೂನ್ 2016, 15:28 IST



ಮುಕ್ತಿ ಬೇಕಿರುವುದು ಕಾಂಗ್ರೆಸ್ಸಿನಿಂದ ಮಾತ್ರವಲ್ಲ

ಬಿಜೆಪಿಯ 'ಕಾಂಗ್ರೆಸ್ ಮುಕ್ತ ಭಾರತ'ದ ಸಂಕಲ್ಪ ಸ್ವತಃ ಬಿಜೆಪಿಗೆ ಆತ್ಮಘಾತಕವಲ್ಲವೇ? ಕಾಂಗ್ರೆಸ್ ಮತ್ತು ಬಿಜೆಪಿಯ ಈ ತನಕದ ಸಂಬಂಧದ ಆಳಕ್ಕಿಳಿದು ನೋಡಿದರೆ ಇಂತಹದ್ದೊಂದು ಪ್ರಶ್ನೆ ಉದ್ಭವಿಸುತ್ತದೆ. ಮಾತ್ರವಲ್ಲ, ಕಾಂಗ್ರೆಸ್ಸನ್ನು ತೆರವುಗೊಳಿಸಿ ಆ ಸ್ಥಾನವನ್ನು ತಾನು ತುಂಬುವುದರಲ್ಲಿ ದೇಶದ ಹಿತ ಅಡಗಿದೆ ಎನ್ನುವ ಬಿಜೆಪಿಯ ವಾದದ ಹಿಂದೆ ಇರುವುದು ಕಾಂಗ್ರೆಸ್ಸಿಗಿಂತ ತಾನು ಉತ್ತಮ ಎನ್ನುವ ತೀರ್ಮಾನ. ಇದು ಕೆಲವು ವ್ಯಕ್ತಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ತಳೆದ ಅವಸರದ ತೀರ್ಮಾನ. ಇದನ್ನು ಪ್ರಶ್ನಿಸದೆ ಎಲ್ಲರೂ ಸ್ವೀಕರಿಸಿದಂತೆ ಕಾಣುತ್ತದೆ.

ಬಿಜೆಪಿ ತಾನು ಕಾಂಗ್ರೆಸ್ಸಿಗಿಂತ ಹೇಗೆ ಭಿನ್ನ ಎನ್ನುವುದನ್ನು ಇನ್ನೂ ಸಾಬೀತುಪಡಿಸಬೇಕಿದೆ. ವಾಸ್ತವದಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳು ಮೂಲಭೂತವಾಗಿ ಒಂದಕ್ಕೊಂದು ಭಿನ್ನವಾಗಿಲ್ಲ. ಎಲ್ಲರೂ ಅನುಸರಿಸುತ್ತಿರುವುದು ಒಂದೇ ಮಾದರಿಯನ್ನು. ವ್ಯತ್ಯಾಸ ಇರುವುದು ಕೇವಲ ಶೈಲಿಯಲ್ಲಿ, ಸತ್ವದಲ್ಲಿ ಅಲ್ಲ. ಇದರಿಂದಾಗಿ ಇನ್ನೊಂದು ಪ್ರಶ್ನೆ ಮೂಡುತ್ತದೆ. ಹಾಗಾದರೆ ಭಾರತ ಕೇವಲ ಕಾಂಗ್ರೆಸ್ಸಿನಿಂದ ಮಾತ್ರ ಯಾಕೆ ಮುಕ್ತಿ ಹೊಂದಬೇಕು? ಬಿಜೆಪಿ ಮತ್ತು ಪ್ರಾದೇಶಿಕ ಪಕ್ಷಗಳೂ ಸೇರಿದಂತೆ ಹಳೆಯ ಮಾದರಿಯ ಎಲ್ಲಾ ಪಕ್ಷಗಳಿಂದಲೂ ಮುಕ್ತವಾದ ಭಾರತದ ಬಗ್ಗೆ ಯೋಚಿಸುವುದಕ್ಕೆ ಬಿಜೆಪಿಯ 'ಕಾಂಗ್ರೆಸ್ ಮುಕ್ತ ಭಾರತ'ದ ಸಂಕಲ್ಪ ಪ್ರೇರಣೆಯಾಗಬಾರದೇಕೆ?

ಭಾರತದ ರಾಜಕೀಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ವಿಚಿತ್ರವಾದ ಒಂದು ಪರಸ್ಪರಾವಲಂಬನದ ಸ್ಥಿತಿ ಇದೆ. ಬಿಜೆಪಿಯ ರಾಜಕೀಯ ಬಂಡವಾಳ ಕಾಂಗ್ರೆಸ್. ಬಿಜೆಪಿ ತನ್ನ ಗೆಲುವಿನ ಮೆಟ್ಟಿಲುಗಳನ್ನು ಅಚ್ಚುಕಟ್ಟಾಗಿ ನಿರ್ಮಿಸಿದ್ದು ಕಾಂಗ್ರೆಸ್ಸಿನ ಸಾಲು ಸಾಲು ಸೋಲುಗಳಲ್ಲಿ. ಜನರಿಗೆ ಕಾಂಗ್ರೆಸ್ಸಿನ ಬಗ್ಗೆ ಇರುವ ಬೇರೆ ಬೇರೆ ರೀತಿಯ ಅಸಮಾಧಾನಗಳನ್ನೇ ಬಿಜೆಪಿ ಮತಗಳನ್ನಾಗಿ ಪರಿವರ್ತಿಸಿಕೊಂಡಿರುವುದು. ಮುಖ್ಯವಾಗಿ ಧರ್ಮದ ವಿಚಾರದಲ್ಲಿ ಕಾಂಗ್ರೆಸ್ ಅನುಸರಿಸುತ್ತಾ ಬಂದಿದೆ ಎನ್ನಲಾದ ಎಡಬಿಡಂಗಿ ನೀತಿಗಳು ಜನರನ್ನು ಬಿಜೆಪಿಯತ್ತ ತಿರುಗುವಂತೆ ಮಾಡಿದ್ದು.

ಕಾಂಗ್ರೆಸ್ ಇಲ್ಲದಲ್ಲಿ ಬಿಜೆಪಿ ಎಲ್ಲಿದೆ? ಬಿಜೆಪಿ ಅಧಿಕಾರದಲ್ಲಿರುವ ಅಷ್ಟೂ ರಾಜ್ಯಗಳನ್ನು ನೋಡಿ. ಅಲ್ಲೆಲ್ಲಾ ಅದು ಸೆಣಸಿ ಗೆದ್ದಿರುವುದು ಕಾಂಗೆಸ್ಸಿನೊಂದಿಗೆ. ಕಾಂಗ್ರೆಸ್ಸೇತರ ಪಕ್ಷಗಳು ಪ್ರಬಲವಾಗಿರುವ ರಾಜ್ಯಗಳಲ್ಲಿ ಬಿಜೆಪಿಯ ರಾಜಕೀಯ ಗಟ್ಟಿಯಾಗಿ ಬೇರುಬಿಡಲಿಲ್ಲ. ರಾಜ್ಯ ಮಟ್ಟದ ಪಕ್ಷಗಳನ್ನು ಸೋಲಿಸಲು ಬಿಜೆಪಿಗೆ ಇನ್ನೂ ಎಲ್ಲೂ ಸಾಧ್ಯವಾಗಲಿಲ್ಲ. ಮುಂಬರುವ ಉತ್ತರ ಪ್ರದೇಶ ಚುನಾವಣೆಯನ್ನು ಯಾವ ಮಾರ್ಗ ಹಿಡಿದಾದರೂ ಗೆದ್ದೇ ತೀರಬೇಕೆಂದು ಬಿಜೆಪಿ ಅಣಿಯಾಗುತ್ತಿರುವುದು ಈ ಕಾರಣಕ್ಕಾಗಿ. ಕಾಂಗ್ರೆಸ್ ಸಂಪೂರ್ಣ ಅಳಿದರೆ ಅದರ ಜಾಗದಲ್ಲಿ ಯಥಾಶಕ್ತಿ ಸ್ಥಳೀಯ ಪಕ್ಷಗಳು ಉದಯಿಸುತ್ತವೆ.

ಕಾಂಗ್ರೆಸ್ಸಿನ ವೈಫಲ್ಯ ಮತ್ತು ಎಡಬಿಡಂಗಿತನಗಳ ಪರಂಪರೆ ಇಲ್ಲದ ಈ ಪಕ್ಷಗಳ ಜತೆ ಸೆಣಸುವುದಕ್ಕೆ ಬಿಜೆಪಿ ಆಗ ಏದುಸಿರು ಬಿಡಬೇಕಾಗುತ್ತದೆ. ಕಾಂಗ್ರೆಸ್, ಬಿಜೆಪಿಯ ದುರ್ಬಲ ಶತ್ರು. ಕಾಂಗ್ರೆಸ್‌ಮುಕ್ತ ಭಾರತದಲ್ಲಿ ಬಿಜೆಪಿಗೆ ಈ ಅನುಕೂಲ ಇರುವುದಿಲ್ಲ. ಈಗಾಗಲೇ ದೆಹಲಿಯಲ್ಲಿ ಈ ಅನುಭವ ಬಿಜೆಪಿಗೆ ಆಗಿದೆ. ಕಾಂಗ್ರೆಸ್ ರಹಿತ ರಾಜಕೀಯ ಅಖಾಡದಲ್ಲಿ ಬಿಜೆಪಿಯೇ ಮುದಿ ಪಕ್ಷ. ಆಗ ಎಲ್ಲ ಸಂಚಿತ ವೈಫಲ್ಯಗಳಿಗೆ ಅದೇ ಹೊಣೆಯಾಗಬೇಕಾಗುತ್ತದೆ. ಬಿಜೆಪಿಗೆ ಕಾಂಗ್ರೆಸ್ ಒಂದು ಗುರಾಣಿ ಇದ್ದಂತೆ. ಈಗ ಅದು ಎಲ್ಲದಕ್ಕೂ ಕಾಂಗ್ರೆಸ್ಸಿನತ್ತ ಬೆರಳು ತೋರಿಸಿ ತಪ್ಪಿಸಿಕೊಳ್ಳಬಹುದು. ಕಾಂಗ್ರೆಸ್ ಇಲ್ಲದ ಕಾಲದಲ್ಲಿ ಬಿಜೆಪಿಗೆ ಯಾವ ರಕ್ಷಣಾ ಕವಚಗಳೂ ಇರುವುದಿಲ್ಲ. ಅಂದರೆ ಕಾಂಗ್ರೆಸ್ಸಿನ ಇಂದಿನ ಸ್ಥಿತಿಯನ್ನು ಆಗ ಬಿಜೆಪಿ ಎದುರಿಸಬೇಕಾಗುತ್ತದೆ.

ಭಾರತವನ್ನು ಕಾಂಗ್ರೆಸ್‌ಮುಕ್ತ ಗೊಳಿಸುತ್ತೇವೆ ಎಂದು ಬಿಜೆಪಿಯವರು ಹೇಳುವುದು ಅಥವಾ ಬಿಜೆಪಿಮುಕ್ತ ಭಾರತ ಕಟ್ಟಲು ಕಾಂಗ್ರೆಸ್ ಮುಂದಾಗುವುದು ಅಥವಾ ಬಿಜೆಪಿ ಮತ್ತು ಕಾಂಗ್ರೆಸ್ ಎರಡರಿಂದಲೂ ಮುಕ್ತವಾದ ಭಾರತವನ್ನು ನೀಡುತ್ತೇವೆ ಎಂದು ಇತರ ಪಕ್ಷಗಳು ಶಪಥ ಮಾಡುವುದು ಇತ್ಯಾದಿಗಳೆಲ್ಲ ಪ್ರಜಾತಂತ್ರ ವಿರೋಧಿ ನಿಲುವುಗಳು. ಯಾವ ಪಕ್ಷವನ್ನು ಯಾವಾಗ ಎಲ್ಲಿಡಬೇಕು ಎನ್ನುವ ನಿರ್ಧಾರ ತೆಗೆದುಕೊಳ್ಳಬೇಕಿರುವುದು ಮತದಾರರು. ಪಕ್ಷಗಳ ಕೆಲಸ ತಾವು ಮತದಾರಿಗೆ ಏನು ಮಾಡುತ್ತೇವೆ ಎಂದು ಹೇಳುವುದು ಮತ್ತು ಹೇಳಿದಂತೆ ನಡೆದುಕೊಳ್ಳುವುದು.

ಬಿಜೆಪಿ ಭರವಸೆ ಹುಟ್ಟಿಸುವಂತೆ ನಡೆದುಕೊಂಡು ಮತ ಯಾಚಿಸಿದ್ದರೆ ಕಾಂಗ್ರೆಸ್‌ಮುಕ್ತ ಭಾರತ ಬೇಕೋ ಬೇಡವೋ ಎಂದು ಜನ ನಿರ್ಧರಿಸುತಿದ್ದರು. ಆ ಪಕ್ಷ ತಾನು ಮಾಡಬೇಕಾದುದನ್ನು ಮಾಡುವ ಮೊದಲೇ ಭಾರತ ಕಾಂಗ್ರೆಸ್ ಮುಕ್ತವಾಗಿ ಬಿಡಬೇಕು ಎಂಬ ಏಕಪಕ್ಷೀಯ ತೀರ್ಮಾನಕ್ಕೆ ಬಂದಿದೆ. ಕಾಂಗ್ರೆಸ್ ತನ್ನ ವೈಫ್ಯಲ್ಯಗಳ ಕಾರಣಕ್ಕೆ ಜಾಗ ಖಾಲಿ

ಮಾಡಬೇಕು ಎನ್ನುವ ಬಿಜೆಪಿಯ ವಾದವನ್ನು ತರ್ಕಕ್ಕಾಗಿ ಒಪ್ಪಿಕೊಳ್ಳೋಣ. ಆದರೆ ಬಿಜೆಪಿ ಕಾಂಗ್ರೆಸ್ಸಿಗಿಂತ ಹೇಗೆ ಭಿನ್ನ ಮತ್ತು ಉತ್ತಮ ಎನ್ನುವ ಪ್ರಶ್ನೆಗೆ ನಿಸ್ಸಂಶಯದ ಉತ್ತರ ಇನ್ನಷ್ಟೇ ದೊರೆಯಬೇಕಿದೆ.

ಬಿಜೆಪಿಯಲ್ಲಿ ನರೇಂದ್ರ ಮೋದಿ ಇದ್ದಾರೆ ಎನ್ನುವುದಷ್ಟೇ ಇದಕ್ಕೆ ಉತ್ತರವಾಗಲಾರದು. 'ಕಾಂಗ್ರೆಸ್ಸಿನ ಕಾಲದಲ್ಲಿ ಹಗರಣಗಳು ನಡೆದಿದ್ದವು; ನಮ್ಮ ಆಡಳಿತ ಹಗರಣಗಳಿಂದ ಮುಕ್ತವಾಗಿದೆ' ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಇದೊಂದು ಉತ್ಪಾದಿತ ಸತ್ಯ (Manufactured truth), ಯಾಕೆಂದರೆ ತನ್ನ ಎರಡು ವರ್ಷಗಳ ಆಡಳಿತವನ್ನು ಹತ್ತು ವರ್ಷಗಳ ಯುಪಿಎ ಆಡಳಿತಕ್ಕೆ ಹೋಲಿಸಿ ಬಿಜೆಪಿ ಈ ನಿರ್ಧಾರಕ್ಕೆ ಬಂದಿರುವುದು. ಈ ಹೋಲಿಕೆಯೇ ತಪ್ಪು. ನಿಜಕ್ಕೂ ಹೋಲಿಸಿ ನೋಡಬೇಕಿರುವುದು ಯುಪಿಎ ಸರ್ಕಾರದ ಮೊದಲ ಎರಡು ವರ್ಷಗಳನ್ನು (2004–2006) ಮತ್ತು ಮೋದಿ ನೇತೃತ್ವದ ಸರ್ಕಾರದ ಎರಡು ವರ್ಷಗಳನ್ನು (2014–16).

ಹಾಗೆ ಹೋಲಿಸಿದರೆ ಮೊದಲ ಎರಡು ವರ್ಷಗಳಲ್ಲಿ ಯುಪಿಎ ಸರ್ಕಾರವೂ ಹಗರಣ ಮುಕ್ತವಾಗಿಯೇ ಇತ್ತು ಮತ್ತು ಪ್ರಾಮಾಣಿಕ, ಪಾರದರ್ಶಕ ಆಡಳಿತದ ಮಂತ್ರವನ್ನು ಜಪಿಸುತ್ತಿತ್ತು ಎಂದು ತಿಳಿಯುತ್ತದೆ. ಅಷ್ಟಕ್ಕೂ ಹಗರಣ ನಡೆದಿಲ್ಲ ಎಂಬ ಕಾರಣಕ್ಕೆ ಭ್ರಷ್ಟಾಚಾರ ನಡೆದಿಲ್ಲ ಮತ್ತು ನಡೆಯುತ್ತಿಲ್ಲ ಎಂದು ಇಂದಿನ ಸಂದರ್ಭದಲ್ಲಿ ಯಾವ ಪಕ್ಷದ ಸರ್ಕಾರವೂ ಹೇಳುವ ಸ್ಥಿತಿಯಲ್ಲಿ ಇಲ್ಲ. ಎರಡನೆಯದ್ದು ಅಭಿವೃದ್ಧಿಯ ವಿಚಾರ. ಇಲ್ಲಿಯೂ ಅಷ್ಟೆ, ಮೋದಿ ನೇತೃತ್ವದ ಸರ್ಕಾರ ಮಾಡಿದ್ದನ್ನೆಲ್ಲ ಸಿನಿಕತನದಿಂದ ಅಲ್ಲಗಳೆಯುವ ಅಗತ್ಯವೇನೂ ಇಲ್ಲ. ಅಭಿವೃದ್ಧಿಯ ವಿಚಾರದಲ್ಲಿ ಏನೋ ವಿಭಿನ್ನವಾದುದನ್ನು ಮಾಡಲು ಈ ಸರ್ಕಾರ ಪ್ರಯತ್ನಿಸುತ್ತಿದೆ ಎಂದೇ ಒಪ್ಪಿಕೊಳ್ಳೋಣ.

ಆದರೆ ಅದು ಕಾಂಗ್ರೆಸ್ ಮಾಡಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆ ಎನ್ನಲು ಈ ತನಕ ನಮಗೆ ಯಾವುದೇ ಆಧಾರ ಲಭಿಸುವುದಿಲ್ಲ. ಮೊದಲ ಎರಡು ವರ್ಷಗಳಲ್ಲಿ ಯುಪಿಎ ಸರ್ಕಾರ ಕೂಡಾ ತನ್ನದೇ ಆದ ಅಭಿವೃದ್ಧಿ ಮಾದರಿ, ತನ್ನದೇ ಆದ ಆಡಳಿತ ಮಾದರಿ ಇತ್ಯಾದಿಗಳ ಪ್ರಯೋಗಕ್ಕೆ ಇಳಿದಿತ್ತು. ಆಗ ಅವೆಲ್ಲ ಹೊಸ ಮಾದರಿಗಳಾಗಿ, ಹೊಸ ಪ್ರಯೋಗಗಳಾಗಿ ಕಾಣಿಸುತ್ತಿದ್ದವು. ಜನ ಅದರ ಬಗ್ಗೆ ಭರವಸೆ ಕೂಡಾ ಹೊಂದಿದ್ದರು. ಇಲ್ಲದೆ ಹೋದರೆ 2009 ರಲ್ಲಿ ಆ ಸರ್ಕಾರ ಎರಡನೆಯ ಬಾರಿಗೆ ಚುನಾವಣೆ ಗೆಲ್ಲುತ್ತಿರಲಿಲ್ಲ. ರಾಜ್ಯಗಳ ವಿಚಾರಕ್ಕೆ ಬಂದರೂ ಅಷ್ಟೆ

ಈಗಾಗಲೇ ಅಭಿವೃದ್ಧಿಯ ಮುಂಚೂಣಿಯಲ್ಲಿರುವ ರಾಜ್ಯಗಳ ಉದಾಹರಣೆಗಳನ್ನು ನೋಡುವುದಾದರೆ ಅಭಿವೃದ್ಧಿಗೆ ಕಾಂಗ್ರೆಸ್ಸಿನಿಂದ ಮುಕ್ತವಾಗುವುದೂ ಬೇಕಿಲ್ಲ; ಬಿಜೆಪಿಯನ್ನು ಅಪ್ಪಿಕೊಳ್ಳುವುದೂ ಬೇಕಿಲ್ಲ. ಪ್ರಗತಿಯನ್ನು ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ನೋಡುವುದಾದರೆ ಭಾರತದಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯ ಕೇರಳ. ಅದು ಕಾಂಗ್ರೆಸ್ಸಿನಿಂದ ಮುಕ್ತವಾಗಿಯೂ ಇರಲಿಲ್ಲ; ಬಿಜೆಪಿಯನ್ನು ಒಪ್ಪಿಕೊಂಡದ್ದೂ ಇಲ್ಲ. ಕೈಗಾರಿಕಾ ರಂಗದಲ್ಲಿ ಅತೀ ಹೆಚ್ಚು ಪ್ರಗತಿ ಸಾಧಿಸಿದ ಮಹಾರಾಷ್ಟ್ರ ಕಾಂಗ್ರೆಸ್ ಮುಕ್ತವಾಗಿರಲಿಲ್ಲ. ಅಭಿವೃದ್ಧಿಗೆ ಹೊಸ ಮಾದರಿಯಾಗಿರುವ ತಮಿಳುನಾಡು ಬಿಜೆಪಿ ಮತ್ತು ಕಾಂಗ್ರೆಸ್ ಎರಡರಿಂದಲೂ ಮುಕ್ತವಾದ ರಾಜ್ಯ.

ಕಳೆದ ಹದಿಮೂರು ವರ್ಷಗಳಿಂದ ಮಧ್ಯಪ್ರದೇಶದ ಆಡಳಿತ ಕಾಂಗ್ರೆಸ್ ಮುಕ್ತವಾಗಿದೆ. ಬಿಜೆಪಿ ಆ ರಾಜ್ಯದ ಅಧಿಕಾರ ಹಿಡಿದಿದೆ. ಹಾಗಂತ ಅಲ್ಲಿ ದೊಡ್ಡ ಮಟ್ಟಿಗಿನ ಬದಲಾವಣೆಯಾದದ್ದು ಕಾಣಿಸುವುದಿಲ್ಲ. ಆದರೆ ಅಲ್ಲಿ ದೊಡ್ಡ ಮಟ್ಟದ ಹಗರಣಗಳಾಗಿವೆ. ಮಾನವ ಅಭಿವೃದ್ಧಿಯಲ್ಲಿ 23 ದೊಡ್ಡ ರಾಜ್ಯಗಳ ಪೈಕಿ ಆ ರಾಜ್ಯ ಇನ್ನೂ 19ನೇ ಸ್ಥಾನದಲ್ಲಿದ್ದು ರಾಷ್ಟ್ರೀಯ ಸರಾಸರಿಗಿಂತ ಕೆಳಗೆ ಉಳಿದಿದೆ. ಜನ ಅಲ್ಲಿ ಮತ್ತೆ ಮತ್ತೆ ಬಿಜೆಪಿ ಸರ್ಕಾರವನ್ನು ಚುನಾಯಿಸಿದ್ದಾರೆ ಎನ್ನುವುದೊಂದೇ ಕಾರಣಕ್ಕೆ ಬಿಜೆಪಿ ಕಾಂಗ್ರೆಸ್ಸಿಗಿಂತ ಭಿನ್ನವಾಗುವುದಿಲ್ಲ. ಕೊನೆಗೂ ಬಿಜೆಪಿಗೆ ತಾನು ಕಾಂಗ್ರೆಸ್ಸಿಗಿಂತ ಭಿನ್ನ ಎಂದು ತೋರಿಸಲು ಉಳಿಯುವುದು ನರೇಂದ್ರ ಮೋದಿ ಮತ್ತು ಗುಜರಾತ್.

ಕರ್ನಾಟಕವನ್ನು ಕಾಂಗ್ರೆಸ್ ಮುಕ್ತ ಮಾಡುವ ದೊಡ್ಡ ಗುರಿಯನ್ನು ಬಿಜೆಪಿ ಹೊಂದಿದೆ. ಒಂದು ವೇಳೆ ಅದು ಸಾಧ್ಯವಾದರೆ ದೇಶವನ್ನು ಕಾಂಗ್ರೆಸ್ ಮುಕ್ತಗೊಳಿಸುವಲ್ಲಿ ಬಿಜೆಪಿ ಒಂದು ದೊಡ್ಡ ಮೈಲುಗಲ್ಲನ್ನು ದಾಟಿದಂತೆ. ಕರ್ನಾಟಕ ಈಗ ಕಾಂಗ್ರೆಸ್ ಕೈಯ್ಯಲ್ಲಿರುವ ಏಕೈಕ ದೊಡ್ಡ ರಾಜ್ಯ. ಆದರೆ ಕಾಂಗ್ರೆಸ್ಸಿನಿಂದ ಮುಕ್ತಗೊಳಿಸಿದ ಕರ್ನಾಟಕವನ್ನು ಬಿಜೆಪಿ ನೀಡುತ್ತಿರುವುದಾದರೂ ಯಾರ ಕೈಗೆ? 2013ರ ಚುನಾವಣೆಯ ವೇಳೆಗೆ ರಾಜ್ಯದ ಜನ ಮಾತ್ರವಲ್ಲ ಇದೇ ಬಿಜೆಪಿಯ ಮಂದಿ ಕೂಡಾ ಯಾರಿಂದ ಮುಕ್ತಿ ಬಯಸಿದ್ದರೋ, ಯಾರ ಕೈಯಲ್ಲಿ ಕರ್ನಾಟಕ ಮತ್ತು ಬಿಜೆಪಿಯ ಮಾನ ಬೀದಿ ಬೀದಿಗಳಲ್ಲಿ ಹರಾಜಾಗಿತ್ತೋ ಅಂತಹ ಒಬ್ಬ ರಾಜಕಾರಣಿಯ ಕೈಯ್ಯಲ್ಲಿ.

ಈ ಸೌಭಾಗ್ಯವನ್ನು ಕರುಣಿಸಲು ಬಿಜೆಪಿ ಅದರ ದಕ್ಷಿಣದ ಹೆಬ್ಬಾಗಿಲನ್ನು ಕಾಂಗ್ರೆಸ್ ಮುಕ್ತಗೊಳಿಸುತ್ತಿರುವುದು! ಅಭಿವೃದ್ಧಿಯ ವಿಚಾರಕ್ಕೆ ಬಂದರೆ ಒಂದೊಂದು ಕಾಲಕ್ಕೆ ಒಂದೊಂದು ಮಾದರಿ ಅದ್ಭುತವಾಗಿ ಕಾಣಿಸುತ್ತದೆ. ಅದಕ್ಕಾಗಿ ಯುಪಿಎ ಒಂದು ದಾರಿ ಹಿಡಿದಿದ್ದರೆ, ಬಿಜೆಪಿ ಇನ್ನೊಂದು ಹಾದಿ ಹಿಡಿದಿದೆ. ಹೆಚ್ಚು ಕಡಿಮೆ ಇದೇ ಹಾದಿಯನ್ನು 1998–

2004ರ  ನಡುವೆ ಆಡಳಿತ ನಡೆಸಿದ ಬಿಜೆಪಿಯ ವಾಜಪೇಯಿ ನೇತೃತ್ವದ ಸರ್ಕಾರ ಕೂಡಾ ಅನುಸರಿಸಿತ್ತು. ಈಗ ಮೋದಿ ನೇತೃತ್ವದ ಸರ್ಕಾರ ತಂದಿರುವ ಇದೇ 'ಹಿತಾನುಭವ'ವನ್ನು 12 ವರ್ಷಗಳ ಹಿಂದೆ ವಾಜಪೇಯಿ ನೇತೃತ್ವದ ಸರ್ಕಾರವೂ ತಂದಿದ್ದನ್ನು ನೆನಪಿಸಿಕೊಳ್ಳಿ

ಆ ನಂತರ ಎಲ್ಲರೂ ಆಶ್ಚರ್ಯಪಡುವಂತೆ ಹಿತಾನುಭವದ ನಡುವೆಯೇ ವಾಜಪೇಯಿ ನೇತೃತ್ವದ ಸರ್ಕಾರ ಚುನಾವಣೆಯಲ್ಲಿ ಸೋತದನ್ನೂ ನೆನಪಿಸಿಕೊಳ್ಳಿ, ಅಂದರೆ ಅಭಿವೃದ್ಧಿಯ ವಿಚಾರದಲ್ಲಿ ಕ್ರಾಂತಿಕಾರಿ ಸೂತ್ರವೊಂದನ್ನು ಯಾವ ಪಕ್ಷವೂ, ಯಾವ ನಾಯಕನೂ ಕಂಡುಕೊಂಡಿಲ್ಲ. ಅದು  ಸುಲಭವೂ ಅಲ್ಲ. ಇನ್ನು ಭ್ರಷ್ಟಾಚಾರದ ವಿಷಯಕ್ಕೆ ಬಂದರೆ ಇಂದಿನ ಚುನಾವಣಾ ವ್ಯವಸ್ಥೆಯಲ್ಲಿ ಯಾವ ಪಕ್ಷವಾದರೂ ಪ್ರಾಮಾಣಿಕ ಸರ್ಕಾರ ನೀಡುತ್ತೇನೆ ಎಂದು ಹೇಳಿದರೆ ಅದೊಂದು ಜೋಕ್.  ರಾಜಕೀಯ ಜಾಣ್ಮೆ ಇದ್ದರೆ ಹಗರಣಗಳು ಹೊರಬಾರದಂತೆ ನೋಡಿಕೊಳ್ಳ ಬಹುದು. ಆದರೆ ಈ ವ್ಯವಸ್ಥೆಯಲ್ಲಿ, ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದು ಯಾರಿಗೂ ಸಾಧ್ಯವಿಲ್ಲ.

ಅಷ್ಟು ಮಾತ್ರವಲ್ಲ, ಯಾವ ರಾಜಕೀಯ ಪಕ್ಷವೂ ಇಂದು ಪಕ್ಷವಾಗಿ ಉಳಿದಿಲ್ಲ. ಎಲ್ಲ ಪಕ್ಷಗಳೂ ಗಿರಕಿ ಹಾಕುತ್ತಿರುವುದು ವ್ಯಕ್ತಿಗಳ ಸುತ್ತ. ಕಾಂಗ್ರೆಸ್ಸನ್ನು ಒಂದೇ ಕುಟುಂಬದ ಇಬ್ಬರೋ ಮೂವರೋ ವ್ಯಕ್ತಿಗಳು ನಿಭಾಯಿಸುತ್ತಿದ್ದರೆ, ಬಿಜೆಪಿಯನ್ನು ಬೇರೆ ಬೇರೆ ಕುಟುಂಬದ ಇಬ್ಬರು ವ್ಯಕ್ತಿಗಳು ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಪ್ರಾದೇಶಿಕ ಪಕ್ಷಗಳದ್ದೂ ಅದೇ ಕತೆ. ಒಂದೋ ಕುಟುಂಬ, ಇಲ್ಲವೇ ವ್ಯಕ್ತಿ. ಈ ಹಿನ್ನೆಲೆಯಲ್ಲಿ ನೋಡಿದರೆ ಭಾರತ ಮುಕ್ತವಾಗಬೇಕಾಗಿರುವುದು ಕಾಂಗ್ರೆಸ್ಸಿನಿಂದ ಮಾತ್ರವಲ್ಲ. ಅದು ಬಿಜೆಪಿಯಿಂದಲೂ ಮುಕ್ತವಾಗಬೇಕು.ಹಾಗೆಯೇ ಪ್ರಾದೇಶಿಕ ಪಕ್ಷಗಳೂ ಸೇರಿದಂತೆ ಹಳೆಯ ಮಾದರಿಯಲ್ಲಿ ರಚನೆಯಾದ, ಹಳೆಯ ಮಾರ್ಗಗಳನ್ನೇ ಚುನಾವಣೆಯಲ್ಲಿ ನೆಚ್ಚಿಕೊಂಡಿರುವ ಎಲ್ಲ ಪಕ್ಷಗಳಿಂದಲೂ ಭಾರತ ಮುಕ್ತವಾಗಬೇಕಿದೆ.

ಈ ಪಕ್ಷಗಳ ಸ್ಥಾನವನ್ನು ಹೊಸ ಹೆಸರಿನ, ಹೊಸ ಸಂರಚನೆಯ, ಹೊಸ ಚಿಂತನೆಯ ಮತ್ತು ಮತದಾರರನ್ನು ನೇರ ಮಾರ್ಗದಲ್ಲಿ ಮುಟ್ಟಬಲ್ಲ ಪಕ್ಷಗಳು ತುಂಬಿದರೆ ಆಗ ಏನಾದರೂ ಹೊಸತನ್ನು ನಿರೀಕ್ಷಿಸಬಹುದು. ಒಂದು ಮಟ್ಟಿಗೆ ಆಮ್ ಆದ್ಮಿ ಪಕ್ಷ ದೆಹಲಿಯಲ್ಲಿ  ರಾಜಕೀಯದ ಹೊಸ ಪ್ರಯೋಗಗಳ ಸಾಧ್ಯತೆಯನ್ನು ತೋರಿಸಿತ್ತು. ಆ ಪಕ್ಷದ ಇಂದಿನ ಸ್ಥಿತಿ ಹೇಗಾದರೂ ಇರಲಿ ಅದು ಆವಿಷ್ಕರಿಸಿದ ಹೊಸ ರಾಜಕೀಯ ಪ್ರಯೋಗದ ಪಾಠಗಳು ಇನ್ನೂ ಪ್ರಸ್ತುತವಾಗಿವೆ. ಉದ್ಯಮ, ಕಲೆ, ಸಿನಿಮಾ, ಸಂಗೀತ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಸ್ಥಾಪಿತ ಹಳೆ ಮಾದರಿಗಳನ್ನು ತ್ಯಜಿಸಿ ಹೊಸ ಹೊಸ ಪ್ರಯೋಗಗಳು ಯಶಸ್ವಿಯಾಗಿ ನಡೆಯುತ್ತಿರುವಾಗ ಪಕ್ಷ ರಾಜಕೀಯ ಮಾತ್ರ ಯಾಕೆ ಹಳೆ ಮಾದರಿಯನ್ನೇ ಇನ್ನೂ ಅನುಸರಿಸಬೇಕು?

ಲೇಖಕ ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕ